# <u>ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ</u>

## <u>ಸಿ.ಸಿ.1915/2019</u>

<u>ಸಾಕ್ಷಿದಾರರ ಹೇಳಿಕೆಃ</u>

**ಹೆಸರು** : ರುದ್ರೇಶ ಚಾಸಾಃ **16** ಪ್ರಾಸಾಃ **10**

**ತಂದೆಯ ಹೆಸರು** : ಸಿದ್ದಪ್ಪ

**ವಯಸ್ಸು** : **52** ವರ್ಷ

**ವೃತ್ತಿ** : ವ್ಯವಸಾಯ

**ವಾಸಸ್ಥಳ** : ಅರಕೆರೆ ಕಾಲೋನಿ

ದಿನಾಂಕಃ **21-02-2026** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದಃ</u>

ಆರೋಪಿ ಗೊತ್ತಿಲ್ಲ. ಚಾಸಾ-1 ಗೊತ್ತಿಲ್ಲ. ಚಾಸಾ-11 ಮತ್ತು ಮೃತ ನಾಗರಾಜ ಹೆಚ್ ಎಸ್ ಗೊತ್ತಿಲ್ಲ. ಚಾಸಾ-11 ಮತ್ತು ನಾಗರಾಜ್ ರವರಿಗೆ ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂಬ ವಿಚಾರ ನನಗೆ ಗೊತ್ತಿಲ್ಲ. ಈಗೇ ಸುಮಾರು 6 ವರ್ಷಗಳ ಹಿಂದೆ ನನ್ನ ವೈಯಕ್ತಿಕ ಕೆಲಸದ ಮೇರೆಗೆ ಹೊನ್ನಾಳಿ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರ ಕೋರಿಕೆಯ ಮೇರೆಗೆ 1 ದಾಖಲೆಗಳಿಗೆ ಸಹಿಯನ್ನು ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ. ಈ ಬಗ್ಗೆ ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

ಪೊಲೀಸರಿಗೆ ಬರೆದುಕೊಟ್ಟ ಮುಚ್ಚಳಿಕೆ ಪತ್ರವನ್ನು ಈಗಾಗಲೇ ನಿಪಿ-35 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-35 (ಬಿ) ಎಂದು ಗುರುತಿಸಲಾಯಿತು.

ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

<u>ಪಾಟೀ ಸವಾಲು:- ಮಾನ್ಯ ಸ.ಸ.ಅ. ರವರಿಂದ:-</u>

ದಿಃ 26-05-2019 ರಂದು ಸಂಜೆ 07-05 ಗಂಟೆ ಸಮಯದಲ್ಲಿ ಚಾಸಾ-12 ರವರು ನನಗೆ ಫೋನ್ ಮಾಡಿ ನಾಗರಾಜರವರಿಗೆ ಮತ್ತು ಅವರ ಜೊತೆಯಲ್ಲಿದ್ದ ಇಬ್ಬರಿಗೆ ಅಪಘಾತವಾಗಿದೆ ಎಂದು ತಿಳಿಸಿದ ಮೇರೆಗೆ ನಾನು ಕೂಡಲೇ ಚಾಸಾ-1 ರವರಿಗೆ ವಿಚಾರವನ್ನು ತಿಳಿಸಿರುತ್ತೇನೆ ಎಂದು ಮತ್ತು ನಂತರ ವಿಚಾರಿಸಲಾಗಿ ನಾಗರಾಜ್ ಎಸ್ ಹೆಚ್ ರವರು ತಮ್ಮ ನಂಬರ್ ಇಲ್ಲದ ಸ್ಕೂಟಿಯನ್ನು ರಸ್ತೆಯ ಎಡಬದಿಯಲ್ಲಿ ಚಾಲನೆ ಮಾಡಿಕೊಂಡು ಹೋಗುತ್ತಿದ್ದಾಗ ಸಂಜೆ ಸುಮಾರು 07-00 ಗಂಟೆ ಸಮಯದಲ್ಲಿ ಅವರ ಹಿಂದೆ ಹೊನ್ನಾಳಿ ಕಡೆಯಿಂದ ಕೆಎ-17/ಇವೈ-2553 ಬೈಕನ್ನು 1 ನೇ ಆರೋಪಿಯು ತನ್ನ ಹಿಂಬದಿಯಲ್ಲಿ ಚಾಸಾ-11 ರವರನ್ನು ಕೂರಿಸಿಕೊಂಡು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಾಗರಾಜರವರ ಬೈಕಿಗೆ ಡಿಕ್ಕಿಪಡಿಸಿದ ಪರಿಣಾಮ ನಾಗರಾಜ, 1 ನೇ ಆರೋಪಿ ಮತ್ತು ಚಾಸಾ-11 ರವರು ಬೈಕ್ ಸಮೇತ ಕೆಳಗೆ ಬದಿದ್ದು ನಾಗರಾಜನಿಗೆ ತಲೆಗೆ, ಎಡಗಣ್ಣಿಗೆ, ಎದೆಗೆ ಮತ್ತು ಇತರ ಕಡೆ ಪೆಟ್ಟು ಬಿದಿದ್ದು, 1 ನೇ ಆರೋಪಿಗೆ ಮೂಗಿಗೆ, ಬಲಗಾಲು ಮೊಣಕಾಲಿಗೆ, ಪಾದಕ್ಕೆ ಬಲಕಿವಿಗೆ ಮತ್ತು ಚಾಸಾ-11 ರವರಿಗೆ ಎಡಗಣ್ಣಿನ ಹತ್ತಿರ, ಎಡತೋಳಿನ ಮೇಲೆ ಪೆಟ್ಟು ಬಿದ್ದು ಗಾಯಗಳಾಗಿ ಎರಡು ಬೈಕುಗಳು ಜಕಂಗೊಂಡಿರುತ್ತವೆ ಎಂದು ಮತ್ತು ಗಾಯಾಳುಗಳನ್ನು ಆಟೋದಲ್ಲಿ ಸಾರ್ವಜನಿಕ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ ಎಂದು ಮತ್ತು 1 ನೇ ಆರೋಪಿ ಮತ್ತು ಚಾಸಾ-11 ರವರು ಹೊನ್ನಾಳಿ ಸರ್ಕಾರಿ ಆಸ್ಪತ್ರೆ ಮತ್ತು ದಾವಣಗೆರೆ ಬಾಪೂಜಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಎಂದು, ನಾಗರಾಜ್ ರವರು ಹೊನ್ನಾಳಿ ಸರ್ಕಾರಿ ಆಸ್ಪತ್ರೆ, ಶಿವಮೊಗ್ಗ ಸಹ್ಯಾದ್ರಿ ನಾರಾಯಣ ಹೃದಾಯಾಲಯ ಆಸ್ಪತ್ರೆ, ಮಂಗಳೂರು ಯಾನೇಪೋಯಾ ಆಸ್ಪತ್ರೆ, ದಾವಣಗೆರೆ ಎಸ್ ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆದು ಮನೆಯಲ್ಲಿದ್ದಾಗ ದಿಃ 25-09-2019 ರಂದು ರಾತ್ರಿ 08-45 ಗಂಟೆ ಸಮಯಕ್ಕೆ ಮೃತಪಟ್ಟಿರುತ್ತಾರೆ ಎಂದು ಪೊಲೀಸರಿಗೆ ನಿಪಿ-37 ರಂತೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು :- ಆರೋಪಿತರ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ ಇಲ್ಲ .

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.